**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 08-04-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರೆದ ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-</u>**

ದಿನಾಂಕ 23-03-2018 ರಂದು ನಿಪಿ-12 ರಿಂದ ನಿಪಿ-22 ರ ದಾಖಲಾತಿಗಳನ್ನು ನಾನೇ ಸ್ವೀಕರಿಸಿದ್ದೇನೆ. ಸದರಿ ದಾಖಲಾತಿಗಳ ಮೇಲಿರುವ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ-12(ಎ) ದಿಂದ ನಿಪಿ-22(ಎ) ಎಂದು ಗುರುತಿಸಲಾಯಿತು. ದಿನಾಂಕ 28-06-2018 ರಂದು ಆರೋಪಿಗೆ ಸಂಬಂಧಪಟ್ಟ ರೂ.1,90,726/- ಹಾಗೂ ರೂ.68,151/-ಗಳ ಎರಡು ರಶೀದಿಗಳ ಒಂದು ಪುಟವನ್ನು ಒಳಗೊಂಡ ಎಂಟು ಪುಟಗಳ ಒಂದು ದಾಖಲಾತಿಯನ್ನು ಸ್ವೀಕರಿಸಿದ್ದೇನೆ. ಸದರಿ ದಾಖಲಾತಿಯನ್ನು ನಿಪಿ-38 ಎಂದು ಸಾಕ್ಷಿಯ ಸಹಿಯನ್ನು ನಿಪಿ-38(ಎ) ಎಂದು ಗುರುತಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>**

ನಿಪಿ-12 ರಿಂದ ನಿಪಿ-22 ರ ದಾಖಲಾತಿಗಳು ಆರೋಪಿಗೆ ಸಂಬಂಧಿಸಿದ್ದವು ಅಲ್ಲ ಎಂದರೆ ಸರಿ. ಸರಕಾರದಿಂದ ಸಾಕ್ಷಿದಾರರ ಬ್ಯಾಂಕ್ ಖಾತೆಗೆ ಜಮಾ ಆದಂತಹ ಹಣದ ಮಾಹಿತಿ ಇದೆ ಎಂದರೆ ಸಾಕ್ಷಿ ಫೋರ್ಜರಿ ಮಾಡಿ ಹಣ ಹಾಕಿದಂತಹ ದಾಖಲಾತಿ ಎಂದು ಹೇಳುತ್ತಾರೆ. ಸಾಕ್ಷಿದಾರರು ತಮ್ಮ ಖಾತೆಗೆ ತಪ್ಪಾಗಿ ಹಣ ಜಮಾ ಆಗಿದ್ದು, ಅದನ್ನು ಮರಳಿ ಸರಕಾರಕ್ಕೆ ತುಂಬಿರುವ ದಾಖಲಾತಿಗಳಾಗಲೀ ಅಥವಾ ಆರೋಪಿಗೆ ಮರಳಿ ಕೊಟ್ಟಿದ್ದರ ಬಗ್ಗೆ ದಾಖಲಾತಿಗಳನ್ನು ನಾನು

ಪಡೆದುಕೊಂಡಿಲ್ಲ. ಆ ಬಗ್ಗೆ ತನಿಖೆ ಮಾಡಿಲ್ಲ ಎಂದರೆ ಸರಿ. ನಿಪಿ-38 ರ ಪ್ರತಿಯೊಂದು ಪುಟಕ್ಕೆ ನಾನು ಸಹಿ ಹಾಕಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಕೊನೆಯ ಪುಟಕ್ಕೆ ಸಹಿ ಹಾಕಿದ್ದೇನೆ ಎಂದು ಹೇಳುತ್ತಾರೆ. ಈ ಪ್ರಕರಣವನ್ನು ನಾನೇ ದಾಖಲಿಸಿದ್ದೇನೆ ಎಂದರೆ ಸರಿ. ದಿನಾಂಕ 03-03-2018 ರಂದು ನಾನು ಪ್ರಥಮ ವರ್ತಮಾನ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಿಪಿ-38ನ್ನು ದಿನಾಂಕ 28-06-2018 ರಂದು ಸ್ವೀಕರಿಸಿದ್ದೇನೆ ಎಂದು ಸಹಿ ಹಾಕಿದ್ದೇನೆ ಎಂದರೆ ಸರಿ. ನಾನು ದಿನಾಂಕ 28-06-2018 ರಂದು ದಾಖಲಾತಿಗಳನ್ನು ಸ್ವೀಕರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 28-06-2018 ರಂದು ಸ್ವೀಕರಿಸಿದ ದಾಖಲಾತಿಗಳ ಮೇಲೆ ದೂರುದಾರರು ದೂರಿನೊಂದಿಗೆ ಹಾಜರುಪಡಿಸಿದ್ದಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಾನು ಯಾವುದೇ ದಾಖಲಾತಿಗಳನ್ನು ಸ್ವೀಕರಿಸಿಲ್ಲ ಅನ್ನುವುದು ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆರೋಪಿಯ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.